## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಬಿ.ಆರ್.ಚಂದ್ರು, ಪಿ.ಡಿ.ಓ. ಬಿ.ಹೊಸೂರು ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

ಓದಲಾಗಿದೆ:

ಸ್ವೀಕೃತಿಸಂಖ್ಯೆ:ಅ.ಸ.ಪ.ಸಂ/ಕಂಪ್ಲೇಂಟ್/ಉಪಲೋಕ್/ಎಮ್‌ವೈಎಸ್–1341/2014/ಡಿಆರ್‌ಇ–2, ದಿನಾಂಕ:15.09.2018.

ಪ್ರಸ್ತಾವನೆ:

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 12.09.2018 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಶ್ರೀ ಸಿ.ಬೋರೇಗೌಡ.ಕೆ, ಗೌಡಗೆರೆ ಗ್ರಾಮ, ಮಂಡ್ಯ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪುತ್ತಾರೆ) ತಮ್ಮ ದೂರಿನಲ್ಲಿ 1) ಶ್ರೀ ಬಿ.ಆರ್.ಚಂದ್ರು, ಪಿ.ಡಿ.ಓ. ಬಿ.ಹೊಸೂರು ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು 2) ಶ್ರೀ ನವೀನ್, ಸಹಾಯಕ ಇಂಜಿನಿಯರ್ ಪಿ.ಆರ್.ಇ.ಉಪವಿಭಾಗ, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತಾರೆ.

ದೂರಿನ ಸಂಕ್ಷಿಪ್ತ ವಿವರಣೆ:–

ದೂರುದಾರರು ತಮ್ಮ ದೂರಿನಲ್ಲಿ, ಮಂಡ್ಯ ತಾಲ್ಲೂಕಿನ ಕೇರಗೋಡು ಹೋಬಳಿ ಬಿ.ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೆ.ಗೌಡಗೆರೆ ಗ್ರಾಮದಲ್ಲಿರುವ ಅಮಣ್ಣಿ ಮನೆಯಿಂದ ಬಿ.ಹಚ್.ಕಾಲೋನಿಗೆ ಹೋಗುವ ರಸ್ತೆಯವರೆಗೆ ಕಳಪೆ ರಸ್ತೆ ಕಾಮಗಾರಿಯನ್ನು ದಿನಾಂಕ:01.11.2013 ರಿಂದ 07.11.2013 ರವರೆಗೆ ಮಾಡಿರುತ್ತಾರೆ. ಸದರಿ ಕಳಪೆ ಕಾಮಗಾರಿಗೆ ಸಂಬಂಧಿಸಿದಂತೆ ದಿನಾಂಕ:08.11.2013 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಂಡ್ಯ ರವರಿಗೆ ದೂರು ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ:03.12.2013ರಂದು ಸ್ಥಳ ಮಹಜರ್ ಮಾಡಿ ಸದರಿ ಕಾಮಗಾರಿಯನ್ನು ದಿನಾಂಕ:02.11.2013 ರಿಂದ ದಿನಾಂಕ:18.11.2013ರವರೆಗೆ ನಡೆದಿರುತ್ತದೆಂದು ಹೇಳಿರುತ್ತಾರೆ. ಮುಂದುವರೆದು, ಮಂಡ್ಯ ತಾಲ್ಲೂಕಿನ ಕೆರೆಗೋಡು ಹೋಬಳಿ ಬಿ.ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೆ.ಗೌಡಗೆರೆ ಗ್ರಾಮದ ಹಳೆ ಸೂಸೈಟಿ ಹಿಂಭಾಗ ದಿನಾಂಕ:04.01.2014 ರಿಂದ 07.01.2014 ರವರೆಗೆ ಬಾಕ್ಸ್ ಚರಂಡಿ ಕಾಮಗಾರಿ ನಡೆದಿದ್ದು, ಈ ಕಾಮಗಾರಿಯು ಸಂಪೂರ್ಣ ಕಳಪೆ ಗುಣಮಟ್ಟದ್ದಾಗಿರುತ್ತದೆ. ಒಂದೇ ಕಡೆ ಸೈಜ್ ಕಲ್ಲನ್ನು ಹಾಕಿ ಮತ್ತೊಂದು ಕಡೆ ಹಾಗೇ ಮುಚ್ಚಿರುತ್ತಾರೆ. ಕಾಲುವೆ ಮರಳನ್ನು ತಂದು 43 ಗ್ರೇಡ್ ಸಿಮೆಂಟ್ ಬಳಸಿ ಕಾಮಗಾರಿ ಮಾಡಿರುತ್ತಾರೆ ಎಂದು ಆಪಾದಿಸಿರುತ್ತಾರೆ.

ದೂರಿಗೆ ಸಂಬಂಧಿಸಿದಂತೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ 1 ನೇ ಎದುರುದಾರರಿ ನೋಟೀಸು ಜಾರಿಯಾದರೂ ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನರೇಗಾ ಯೋಜನೆಯಡಿ ಸರ್ಕಾರವು ಹೊರಗುತ್ತಿಗೆ ಸಂಸ್ಥೆಯಿಂದ ತಾಂತ್ರಿಕ ಸಹಾಯಕ ಇಂಜಿನಿಯರ್‌ಗಳ ನೇಮಕ ಮಾಡಿಕೊಂಡ ಸಂದರ್ಭದಲ್ಲಿ ದಿ.21.09.2013 ರಂದು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿ, ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ಕಾಮಗಾರಿಯ ಅನುಷ್ಠಾನಗೊಳಿಸಲು ಪಿ.ಆರ್.ಇ.ಡಿ.ಉಪವಿಭಾಗ ಮಂಡ್ಯ ದ.ಕಿರಿಯ ಇಂಜಿನಿಯರ್ ಶ್ರೀ ಟಿ.ಶ್ರೀನಿವಾಸ್ ರವರ ಸೂಚನೆಯಂತೆ ಕಾಮಗಾರಿಯ ಅಳತೆ ಮಾಡಿಲಾಗಿದ್ದು, ದೂರುದಾರರು ಆರೋಪಿಸಿರುವ ಕಾಮಗಾರಿಯ ಅನುಷ್ಠಾನದಲ್ಲಿ ಅವರ ಯಾವುದೇ ವೈಯಕ್ತಿಕ ಹಿತಾಸಕ್ತಿಯೂ ಇರುವುದಿಲ್ಲವೆಂದು ದೂರಿನಲ್ಲಿರುವ ಆಪಾದನೆಯನ್ನು ನಿರಾಕರಿಸಿರುತ್ತಾರೆ.

ದೂರಿನ ಬಗ್ಗೆ ಸಹಾಯಕ ಇಂಜಿನಿಯರ್ ಸಂ.6 ರವರಾದ ಶ್ರೀ ಗುರುಪ್ರಸಾದ್ ಜೆ.ಡಿ. (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ವರದಿಯಲ್ಲಿ ಆಪಾದಿತ ಕಾಮಗಾರಿಗಳಾದ ಕೆ.ಗೌಡಗೆರೆ ಗ್ರಾಮದ ಹಳೆ ಸೊಸೈಟಿ ಹಿಂಭಾಗದ ಚರಂಡಿ ನಿರ್ಮಾಣ ಕಾಮಗಾರಿ ಮತ್ತು ಕೆ.ಗೌಡಗೆರೆ ಗ್ರಾಮದ ಅಮ್ಮಣ್ಣಿ ಮನೆಯಿಂದ ಬಿ.ಹೆಚ್.ಕಾಲೋನಿಗೆ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿಯ ದಾಖಲೆಗಳನ್ನು ಮತ್ತು ಸ್ಥಳವನ್ನು ಪರಿಶೀಲಿಸಿದಾಗ, ಸದರಿ ಕಾಮಗಾರಿಗಳ ಅಂದಾಜು ಮೊತ್ತ ರೂ.50,000/- ಮತ್ತು ರೂ. 95,000/- ಆಗಿದ್ದು, ಕಾಮಗಾರಿಗಳನ್ನು ನರೇಗಾ ಯೋಜನೆಯಡಿ ಮಾಡಿರುತ್ತಾರೆ. ಸದರಿ ಕಾಮಗಾರಿಗಳಿಗೆ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಂಜೂರಾತಿ ನೀಡಿದ್ದು, ಶಾಖಾಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಉಪವಿಭಾಗ, ಮಂಡ್ಯ ರವರು ತಾಂತ್ರಿಕ ಮಂಜೂರಾತಿ ನೀಡಿ, ಪರಿಶೋಧನೆಯನ್ನು ಕಿರಿಯ ಇಂಜಿನಿಯರ್ ಮಾಡಿರುತ್ತಾರೆ. ಅಂದಾಜುಪಟ್ಟಿ ಮತ್ತು ಅಳತೆ ಪುಸ್ತಕವನ್ನು ಮತ್ತು ಕಾಮಗಾರಿಗಳನ್ನು ಪರಿಶೀಲಿಸಿದಾಗ ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸಿದ್ದು ಹಾಗೂ ಅಳತೆ ಪುಸ್ತಕದಲ್ಲಿ ಕಾಮಗಾರಿಯ ಅಳತೆ ಹೊಂದಾಣಿಕೆ ಆಗುತ್ತಿರುತ್ತದೆಂದು ತಿಳಿಸಿರುತ್ತಾರೆ. ಮೊದಲನೆಯ ಕಾಮಗಾರಿಯ ಸಾಮಾಗ್ರಿ ಖರೀದಿಗಾಗಿ ಒಟ್ಟು 48,784/- ರೂ. ಹಣ ಖರ್ಚಾಗಿದ್ದು ಮತ್ತು 166 ಮಾನವದಿನಗಳ ಕಾಮಗಾರಿ ನಿರ್ವಹಿಸಿರುತ್ತಾರೆ. 2ನೇ ಕಾಮಗಾರಿಯ ಸಾಮಗ್ರಿ ಖರೀದಿಗಾಗಿ ಒಟ್ಟು 92,022/- ರೂ.ಹಣ ಖರ್ಚಾಗಿದ್ದು ಮತ್ತು 248 ಮಾನವದಿನಗಳ ಕಾಮಗಾರಿ ನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ಅಳತೆ ಪುಸ್ತಕಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳನ್ನು ಯಾವ ದಿನಾಂಕದಂದು ಪ್ರಾರಂಭಿಸಿರುವ ಮತ್ತು ಪೂರ್ಣಗೊಳಿಸಿರುವ ಬಗ್ಗೆ ನಮೂದಿಸಿರುವುದಿಲ್ಲ, ಜೂನಿಯರ್ ಇಂಜಿನಿಯರ್ ರವರ ಸಹಿ ಇರುವುದಿಲ್ಲ, ಸಹಾಯಕ ಇಂಜಿನಿಯರ್ ಆಗಲೀ ಅಥವಾ ಕಾರ್ಯಪಾಲಕ ಅಭಿಯಂತರಾಗಲೀ ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಚೆಕ್ ಮೆಷರ್‌ಮೆಂಟ್ ಮಾಡಿರುವುದಿಲ್ಲ ಆದರೆ ಪಂಚಾಯತಿ ಅಧ್ಯಕ್ಷರು ಮತ್ತು 1ನೇ ಎದುರುದಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಬಿಲ್ ಮಾಡಲಾಗಿದೆಯೆಂದು ಸಹಿ ಮಾಡಿರುತ್ತಾರೆ. ಕಾಮಗಾರಿಗೆ ಯಾವ ದಿನಾಂಕದಂದು ಸಾಮಾಗ್ರಿಗಳನ್ನು ಪೂರೈಸಿರುತ್ತಾರೆಂದು ತಿಳಿಸಿರುವುದಿಲ್ಲ. ಸಾಮಗ್ರಿಗಳನ್ನು ಪಡೆಯುವುದಕ್ಕಿಂತ ಮುಂಚೆ ದರಪಟ್ಟಿಯನ್ನು ಕರೆದ ಬಗ್ಗೆ ಎದುರುದಾರರು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕಾಮಗಾರಿಯನ್ನು ನರೇಗಾ ಯೋಜನೆಯಡಿ ಕೂಲಿ ಆಳುಗಳಿಂದ ಮಾಡಿದ್ದು ಎಂದು ತಿಳಿಸಿರುವ ಪಟ್ಟಿ ಮತ್ತು ಹಾಜರಾತಿ ಪುಸ್ತಕದ ನಕಲನ್ನು ಹಾಜರುಪಡಿಸುತ್ತಾರೆ. ಆದರೆ ಕೂಲಿ ಆಳುಗಳಿಗೆ ಜಾಬ್ ಕಾರ್ಡ್ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಬ್ಯಾಂಕ್ ಖಾತೆಗೆ ಹಣ ಜಮಾ ಆದ ಬಗ್ಗೆ ಬ್ಯಾಂಕ್ ಪಾಸ್ ಪುಸ್ತಕದ ನಕಲುಗಳನ್ನು ಹಾಜರುಪಡಿಸಿರುವುದಿಲ್ಲ.

2ನೇ ಎದುರುದಾರರು ಹೊರಗುತ್ತಿಗೆಯಡಿ ನೇಮಕಗೊಂಡಿದ್ದರಿಂದ ಅವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ಅನ್ವಯವಾಗುವುದಿಲ್ಲ. ನರೇಗಾ ಯೋಜನೆಯಡಿ ಗ್ರಾಮದಲ್ಲಿ ಕಾಮಗಾರಿಯನ್ನು ಕೈಗೊಂಡಾಗ ಗ್ರಾಮ ಪಂಚಾಯತಿಯ ಜವಾಬ್ದಾರಿಯುತ ಅಧಿಕಾರಿಗಾಗಿ ಕಾಮಗಾರಿಯನ್ನು ನಿರ್ವಹಿಸಿದ ಬಗ್ಗೆ 1ನೇ ಎದುರುದಾರರು ಪರಿಶೀಲನೆ ಮಾಡಿರುವುದಿಲ್ಲ. ಆದ್ದರಿಂದ ಕರ್ತವ್ಯಲೋಪವೆಸಗಿ ದುರ್ನಡತೆಯೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ 1ನೇ ಎದುರುದಾರರು ಈಗಾಗಲೇ ನಿವೃತ್ತರಾಗಿದ್ದ ಪಕ್ಷದಲ್ಲಿ ಕೆ.ಸಿ.ಎಸ್.ಆರ್.ನಿಯಮ 214(2)(ಬಿ) ಅಡಿಯಲ್ಲಿ ಅನುಮತಿ ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ಅಡಿಯಲ್ಲಿ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರನ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/453/ಗ್ರಾಪಂಕಾ/2018**
**ಬೆಂಗಳೂರು, ದಿನಾಂಕ:30-10-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಿ.ಆರ್.ಚಂದ್ರು, ಪಿ.ಡಿ.ಓ. ಬಿ.ಹೊಸೂರು ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು; ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 18).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
6. ಶ್ರೀ ಬಿ.ಆರ್.ಚಂದ್ರು, ಪಿ.ಡಿ.ಓ. ಬಿ.ಹೊಸೂರು ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.